ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಿಂದ ನೆರೆ ಪೀಡಿತ ಪ್ರದೇಶದಲ್ಲಿ 5 ಸಾವಿರ ಮನೆಗಳ ನಿರ್ಮಾಣ

919 (408) ಶ್ರೀ ರಾಮಲಿಂಗಾರೆಡ್ಡಿ (ಬಿ.ಟಿ.ಎಂ.ಲೇಔಟ್) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಿಂದ (ಕೆ.ಎಸ್. ಆರ್.ಟಿ.ಸಿ.) ಉತ್ತರ ಕರ್ನಾಟಕದ ಸಂತ್ರಸ್ತರಿಗೆ 5 ಸಾವಿರ ಮನೆಗಳನ್ನು ನಿರ್ಮಿಸಲಾಗುತ್ತಿದೆಯೇ;

ಆ) ಹಾಗಿದ್ದಲ್ಲಿ, ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆ ಯಾವ ಕಂಪನಿಗಳ ನೆರವನ್ನು ಇದಕ್ಕಾಗಿ ಪಡೆಯಲಾಗಿದೆ.

ಇ) ಈ ಮನೆಗಳ ನಿರ್ಮಾಣ ಪ್ರಗತಿಯು ಪ್ರಾರಂಭವಾಗಿದೆಯೇ;

ಈ) ಈ ಮನೆಗಳಿಗೆ ತಗಲುವ ವೆಚ್ಚವೆಷ್ಟು?

ಉ) ಈ ಮನೆಗಳು ಯಾವಾಗ ಪೂರ್ಣಗೊಳ್ಳುವುದು;

ಶ್ರೀ ಆರ್. ಅಶೋಕ್ (ಸಾರಿಗೆ ಸಚಿವರು) :

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ನೇರವಾಗಿ ಮನೆಗಳನ್ನು ನಿರ್ಮಿಸುತ್ತಿಲ್ಲ. ಆದರೆ ಸಂಸ್ಥೆಯು ರಾಜ್ಯದ ನಾಲ್ಕು ಸಾರಿಗೆ ನಿಗಮಗಳು ಮತ್ತು ಸಾರಿಗೆ ಇಲಾಖೆ ಹಾಗೂ ಇತರೆ ಮೂಲಗಳಿಂದ ನಿಧಿಯನ್ನು ಸಂಗ್ರಹಿಸಿ ಕರ್ನಾಟಕ ಸರ್ಕಾರದ ಪ್ರಕೃತಿ ವಿಕೋಪ ಪರಿಹಾರ ನಿಧಿಗೆ ಪಾವತಿಸಲಾಗಿರುತ್ತದೆ. ವಿವರಗಳು ಕೆಳಕಂಡಂತಿದೆ:

1) ಸಾರಿಗೆ ನಿಗಮಗಳ ಅಧಿಕಾರಿ/ ಉದ್ಯೋಗಿಗಳ ಒಂದು ದಿನದ ವೇತನ	ರೂ.2,80,07,565/-
2) ಸರಬರಾಜುದಾರರಿಂದ ಸ್ವೀಕರಿಸಿದ ಮೊತ್ತ	ರೂ.48,04,866/-
3) ಸಾರಿಗೆ ಸಚಿವರ ಕಛೇರಿಯಲ್ಲಿ ಸ್ವೀಕರಿಸಿರುವ ದೇಣಿಗೆ	ರೂ.33,29,113/-
4) ಸಾರಿಗೆ ಇಲಾಖೆಯವರು ಸ್ವೀಕರಿಸಿರುವ ದೇಣಿಗೆ	ರೂ.75,25,000/-
ಒಟ್ಟು	**ರೂ.4,36,66,544/-**

ಆ) ಅನ್ವಯಿಸುವುದಿಲ್ಲ.

ಇ) ಅನ್ವಯಿಸುವುದಿಲ್ಲ.

ಈ) ಅನ್ವಯಿಸುವುದಿಲ್ಲ.

ಉ) ಅನ್ವಯಿಸುವುದಿಲ್ಲ.

ಬೆಂಗಳೂರು ನಗರದಲ್ಲಿ ನವಜಾತ ಶಿಶು ಪತ್ತೆ ಪ್ರಕರಣಗಳು

920 (409) ಶ್ರೀ ರಾಮಲಿಂಗಾ ರೆಡ್ಡಿ (ಬಿ.ಟಿ.ಎಂ. ಲೇಔಟ್) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಕಳೆದ ಎರಡು ವರ್ಷಗಳಿಂದ ಎಷ್ಟು ನವಜಾತ ಶಿಶು ಪತ್ತೆ ಪ್ರಕಣಗಳು ದಖಿಲಾಗಿವೆ;

ಆ) ನವಜಾತ ಶಿಶುಗಳನ್ನು ಪೋಷಿಸಲು ತಮಿಳುನಾಡು ಸರ್ಕಾರ ಜಾರಿಗೆ ತಂದ ರೀತಿಯಲ್ಲಿ "ಕ್ರೆಡಲ್" ವಿಶೇಷ ಯೋಜನೆಯನ್ನು ರಾಜ್ಯದಲ್ಲೂ ಜಾರಿಗೆ ಸರ್ಕಾರ ಉದ್ದೇಶಿಸಿದೆಯೇ?

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 2008-09 ರಲ್ಲಿ ಎರಡು (ಒಂದು: ಗಂಡು ಮತ್ತು ಒಂದು ಹೆಣ್ಣು), 2009-10ರಲ್ಲಿ ಒಂದು (ಹೆಣ್ಣು) ನವಜಾತ ಶಿಶು ಪ್ರಕರಣಗಳು ದಾಖಲಾಗಿವೆ.

ಆ) ಅಂತಹ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ರಾಜ್ಯದಲ್ಲಿ ಹಿಂದುಳಿದ ಜನಗಣತಿ ನಗ್ಗೆ

921 (410) ಶ್ರೀ ರಾಮಲಿಂಗಾರೆಡ್ಡಿ (ಬಿ.ಟಿ.ಎಂ. ಲೇಔಟ್) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಹಿಂದುಳಿದ ಜಾತಿಗಳ ಜನಗಣತಿ ಮಾಡಲು 2005 ಮತ್ತು 2006ನೇ ಸಾಲಿನಲ್ಲಿ ರಾಜ್ಯ ಸರ್ಕಾರ ಬಿಡುಗಡೆ ಮಾಡಿದ ಹಣವೆಷ್ಟು;

ಆ) ಈ ಕಾರ್ಯಕ್ರಮಕ್ಕೆ ಕೇಂದ್ರ ಸರ್ಕಾರ ಬಿಡುಗಡೆ ಮಾಡಿದ ಹಣವೆಷ್ಟು;

ಇ) ಹಿಂದುಳಿದ ವರ್ಗಗಳ ಜಾತಿವಾರು ಸಮೀಕ್ಷೆ ಪೂರ್ಣ ಗೊಂಡಿದೆಯೇ;

ಈ) ಜಾತಿವಾರು ಜನಗಣತಿಯ ಇತ್ತೀಚಿನ ಬೆಳವಣಿಗೆ ಏನು?